# ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1206/2015

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ವೆಂಕಟೇಶ್ | CW: 7 | PW: 5 |
| ತಂದೆಯ ಹೆಸರು | : | ಈರಪ್ಪ | | |
| ವಯಸ್ಸು | : | 46 | | |
| ವೃತ್ತಿ | : | ವ್ಯಾಪಾರ | | |
| ವಾಸಸ್ಥಳ | : | ಸವಳಂಗ | | |

ದಿನಾಂಕಃ 10.12.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು ಗೊತ್ತು. ಚಾಸಾ 1 ಮತ್ತು 4 ರವರು ನನ್ನ ಸೋದರತ್ತೆಯ ಮಕ್ಕಳು. ಚಾಸಾ 5 ನನ್ನ ಸೋದರ ಅತ್ತೆ. ಚಾಸಾ 6 ನನ್ನ ಚಿಕ್ಕಪ್ಪನ ಮಗ. ಚಾಸಾ 8 ಮತ್ತು 9 ರವರು ಗೊತ್ತು. 1 ನೇ ಆರೋಪಿ ಮತ್ತು ಚಸಾ 4 ರವರ ನಡುವೆ ಮದುವೆಯಾಗಿ 2 ವರ್ಷಗಳ ತನಕ ಚೆನ್ನಾಗಿದ್ದು ನಂತರ ಸಣ್ಣ ಪುಟ್ಟ ವಿಚಾರಗಳಿಗೆ ಗಲಾಟೆಯಾಗಿರುತ್ತದೆ. ನಾನು, ಚಾಸಾ 1 ಮತ್ತು 5 ರವರು ಚಾಸಾ 4 ರವರಿಗೆ ಬುದ್ದಿಮಾತು ಹೇಳಿ 1 ನೇ ಆರೋಪಿಯ ಮನೆಗೆ ಕಳುಹಿಸಿಕೊಟ್ಟಿರುತ್ತೇವೆ. ಕೆಲವು ದಿನಗಳ ನಂತರ ಚಾಸಾ 4 ರವರು ಆತ್ಮಹತ್ಯೆಗೆ ಯತ್ನಿಸಿರುತ್ತಾರೆ ಎಂದು ಗೊತ್ತಾಗಿ ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಹೋಗಿ ನೋಡಿ, ಹೆಚ್ಚಿನ ಚಿಕಿತ್ಸೆ ಗೆ ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ ವಾಸಿಯಾದ ನಂತರ ಚಾಸಾ 4 ರವರನ್ನು ಮನೆಗೆ ಕರೆದುಕೊಂಡು ಹೋಗಿರುತ್ತೇವೆ.

1 ನೇ ಆರೋಪಿಯು ಆಗಾಗ ಬಂದು ಚಾಸಾ 4 ರವರನ್ನು ಮಾತನಾಡಿಸುತ್ತಿದ್ದ. ಹಿರಿಯರನ್ನು ಕರೆದುಕೊಂಡು ಬಂದು ಚಾಸಾ 4 ರವರನ್ನು ಕರೆದುಕೊಂಡು ಹೋಗುವಂತೆ ಚಾಸಾ 5 ರವರು 1 ನೇ ಆರೋಪಿಗೆ ಹೇಳಿ ಕಳುಹಿಸಿರುತ್ತಾರೆ. 1 ನೇ ಆರೋಪಿ ಮತ್ತು ಅವರ ಸಂಬಂಧಿಕರು ರಾಜೀ ಪಂಚಾಯತಿಗೆ ಬಂದಿದ್ದು 8 ನೇ ಆರೋಪಿಯು ಗಲಾಟೆ ವಿಚಾರನ್ನು ಚಾಸಾ 4 ರವರನ್ನು ಕೇಳಲಾಗಿ 1 ನೇ ಆರೋಪಿಯು ನನಗೆ ತಲೆಗೆ ಹೊಡೆದಿರುವುದು ಮಾತ್ರ ನೆನಪಿರುತ್ತದೆ ಎಂದು ನುಡಿಯುತ್ತಾರೆ. ಯಾಕೆ ಅಷ್ಟು ಸಲ ಒಂದೇ ಪ್ರಶ್ನೆ ಕೇಳುತ್ತಿದ್ದೀಯಾ ಎಂದು ನಾನು 8 ನೇ ಆರೋಪಿಯನ್ನು ಕೇಳಲಾಗಿ ಆತನು ನನ್ನ ಕೊರಳಪಟ್ಟಿ ಹಿಡಿದುಕೊಂಡು ಗಲಾಟೆ ಮಾಡಿದ, 11 ನೇ ಆರೋಪಿಯು ಕಲ್ಲಿನಿಂದ ನನ್ನ ಮುಖಕ್ಕೆ ಹೊಡೆದ. ನಾನು ಕೆಳಗೆ ಬಿದ್ದಾಗ ಆರೋಪಿಗಳೆಲ್ಲರೂ ನನಗೆ ಹೊಡೆದು ಹಲ್ಲೆ ಮಾಡಿ  ನನಗೆ ಅವಾಚ್ಯ ಶಬ್ದಗಳಿಂದ ಬೈದು 1 ನೇ ಆರೋಪಿಯು ದೊಣ್ಣೆಯಿಂದ  ನನಗೆ ಹೊಡೆದು ಗಾಯಗೊಳಿಸಿದ. ನಂತರ ನನ್ನನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.  3 ದಿನಗಳ ಚಿಕಿತ್ಸೆಯ ನಂತರ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿರುತ್ತೇನೆ. ಈ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿದ್ದು, ಉಳಿದ ಆರೋಪಿಗಳು ಗೈರು ಹಾಜರಿದ್ದು , ಉಳಿದ  ಆರೋಪಿಗಳ ಗುರುತಿಸುವಿಕೆಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ಆರೋಪಿಗಳೆಲ್ಲರೂ ನನಗೂ, ಚಾಸಾ 1, 4 ರಿಂದ 6 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿ ಕೈಕಾಲುಗಳಿಂದ ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಚಾಸಾ 8 ಮತ್ತು 9 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ.  ಜಗಳವು  ದಿಃ 27.07.2015 ರಂದು ಸಂಜೆ

4.30 ರ ಸಮಯದಲ್ಲಿ ಸವಳಂಗದ ಮಿಕ್ಕಿದ ಮಾರಿಕಾಂಬ ದೇವಸ್ಥಾನದಲ್ಲಿ ನಡೆದಿರುತ್ತದೆ ಎಂದರೆ ಸರಿ.

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಎಂ ಜಿ ವಕೀಲರಿಂದಃ-</u>

ಚಾಸಾ 4 ರವರಿಗೆ ಮಾನಸಿಕ ಖಾಯಿಲೆ ಇತ್ತು ಎಂದರೆ ಸರಿಯಲ್ಲ. ಸದರಿ ಪಂಚಾಯತಿಗೆ ಸುಮಾರು ಎಷ್ಟು ಜನ ಸೇರಿದ್ದರು ಎಂದರೆ 14 ರಿಂದ 15 ಜನ ಎಂದು ನುಡಿಯುತ್ತಾರೆ. ಪಂಚಾಯತಿ ಯಾವ ಸಮಯದಲ್ಲಿ ಆಗಿರುತ್ತದೆ ಎಂದರೆ ಸಂಜೆ 4.30 ರಿಂದ 5.30 ಎಂದು ನುಡಿಯುತ್ತಾರೆ. 1 ನೇ ಆರೋಪಿಯು ನನ್ನ ತಲೆಗೆ ಹೊಡೆದಿರುತ್ತಾರೆ ಎಂದು ಚಾಸಾ 4 ರವರು ಸದರಿ ಪಂಚಾಯತಿಯಲ್ಲಿ ಚಾಸಾ 8 ರವರು ಕೇಳಿದಾಗ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 8 ನೇ ಆರೋಪಿ ನನ್ನ ಕೊರಳಪಟ್ಟಿಯನ್ನು ಹಿಡಿದು ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 11 ನೇ ಆರೋಪಿಯು ಕಲ್ಲಿನಿಂದ ನನ್ನ ಮುಖಕ್ಕೆ ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಕೆಳಗೆ ಬಿದ್ದಾಗ ಆರೋಪಿಗಳೆಲ್ಲರೂ ಕೈಕಾಲುಗಳಿಂದ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿಯು ದೊಣ್ಣೆಯಿಂದ ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಚಾಸಾ 4 ರವರಿಗೆ ಎಷ್ಟು ಜನ ಮಕ್ಕಳು ಎಂದರೆ ಇಬ್ಬರು ಗಂಡು ಮಕ್ಕಳು. ಮಕ್ಕಳು ಈಗ ಯಾರ ಜೊತೆ ಇದ್ದಾರೆ ಎಂದರೆ 1 ನೇ ಆರೋಪಿಯ ಜೊತೆ ಎಂದು ನುಡಿಯುತ್ತಾರೆ. ಚಾಸಾ 4 ರವರು ಹೇಳದೇ ಕೇಳದೇ 1 ನೇ ಆರೋಪಿಯನ್ನು ಬಿಟ್ಟು ತವರು ಮನೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ಮು.ಮಾಲಿನಿಂದ ನನಗೆ ಹೊಡೊ ಗಾಯಗೊಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಬಿದ್ದು ಮಾಡಿಕೊಂಡ ಗಾಯಕ್ಕೆ ಆರೋಪಿಗಳ ವಿರುದ್ಧ ಸುಳ್ಳು ದೂರು ಕೊಡಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ದಿನಾಂಕ ನೆನಪಿಲ್ಲ. ಆರೋಪಿಗಳು ಚಾಸಾ 1, 4 ರಿಂದ 6 ರವರೆಗೂ ಸಹ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 1 ರಿಂದ 6 ರವರು ನನಗೆ ಸಂಬಂಧಿಕರಾಗಿದ್ದರಿಂದ ಯಾವುದೇ ಗಲಾಟೆ ಆಗಿಲ್ಲದೇ ಇದ್ದರೂ ಸಹ ಆರೋಪಿಗಳ

ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 8 ಮತ್ತ 9 ರವರು ಜಗಳ ಬಿಡಿಸಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.